# ನೃತ್ಯಸರಸ್ವತಿ ಕಾದಂಬರಿಯ ಶಾಂತಲೆ

**ದಿವ್ಯಶ್ರೀ ಸಿ.ಜಿ.* & ವಿಶ್ವನಾಥ***

**DOI: https://doi.org/10.5281/zenodo.22300300**

**ABSTRACT**

ವೈ.ಕೆ. ಸಂಧ್ಯಾ ಶರ್ಮ ವಿರಚಿತ 'ನೃತ್ಯಸರಸ್ವತಿ' ಐತಿಹಾಸಿಕ ಕಾದಂಬರಿಯು ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟದರಸಿ 'ಶಾಂತಲೆ'ಯ ಬದುಕಿನ ಉತ್ಕರ್ಷ ಮತ್ತು ಅಪಕರ್ಷಗಳ ರೋಚಕ ಕಥನವಾಗಿದೆ. ಶ್ರವಣಬೆಳಗೊಳದ ಬೋಕಿಮಯ್ಯನ ಶಾಸನದ ಪ್ರಧಾನತೆಯ ಮೇಲೆ ರೂಪುಗೊಂಡ ಈ ಕೃತಿಯು, ಶಾಂತಲೆಯ ಅದ್ಭುತ ನೃತ್ಯಪ್ರತಿಭೆ, ಆಡಳಿತಾತ್ಮಕ ಜಾಣ್ಮೆ, ವಾಸ್ತುಶಿಲ್ಪದ ಮೇಲಿನ ಒಲವು ಹಾಗೂ ಸರ್ವಧರ್ಮ ಸಮನ್ವಯತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತದೆ. ಒಬ್ಬ ಅಪ್ರತಿಮ ರಾಣಿಯಾಗಿ ಸಾಮ್ರಾಜ್ಯವನ್ನು ಮುನ್ನಡೆಸಿದರೂ, ಸಾಮಾನ್ಯ ಹೆಣ್ಣಾಗಿ ಆಕೆ ಅನುಭವಿಸಿದ ಮಾನಸಿಕ ತುಮುಲಗಳು ಇಲ್ಲಿ ಪ್ರಮುಖವಾಗಿವೆ. ಸವತಿಯ ಮತ್ಸರ, ಪ್ರೀತಿಯ ಪುತ್ರನ ಸಾವು ಹಾಗೂ ಪತಿಯ ನಿರ್ಲಕ್ಷ್ಯದಿಂದ ನೊಂದ ಶಾಂತಲೆಯು ಶಿವಗಂಗೆಯಲ್ಲಿ ಸಲ್ಲೇಖನ ವ್ರತಕ್ಕೆ ಮುಂದಾಗುವ ಅಂತರಂಗದ ಸಂಘರ್ಷವನ್ನು ಕೃತಿ ಮಾರ್ಮಿಕವಾಗಿ ಸೆರೆಹಿಡಿದಿದೆ. ಹೊಯ್ಸಳರ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಭವವನ್ನು ಮಹಿಳಾ ಪ್ರಧಾನ ದೃಷ್ಟಿಕೋನದಿಂದ ವಿಶ್ಲೇಷಿಸಿರುವುದು ಗಮನಾರ್ಹವಾಗಿದೆ.

**KEYWORDS:** ಶಾಂತಲೆ, ನೃತ್ಯಸರಸ್ವತಿ ಕಾದಂಬರಿ, ಹೊಯ್ಸಳ ಸಾಮ್ರಾಜ್ಯ, ಮಹಿಳಾ ಸಂವೇದನೆ, ಐತಿಹಾಸಿಕ ಕಾದಂಬರಿ.

* **ದಿವ್ಯಶ್ರೀ ಸಿ.ಜಿ.,** ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

** **ಡಾ. ವಿಶ್ವನಾಥ,** ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಕನ್ನಡನಾಡನ್ನು ಹಲವು ರಾಜಮನೆತನಗಳು ಆಳ್ವಿಕೆ ನಡೆಸಿ ಭವ್ಯ ಪರಂಪರೆಯನ್ನು ರೂಪಿಸಿವೆ. ಕರ್ನಾಟಕದ ಹಲವು ರಾಜಮನೆತನಗಳಲ್ಲಿ ಕದಂಬರು, ಶಾತವಾಹನರು, ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಒಡೆಯರು ಪ್ರಮುಖರು. ಇಂತಹ ಪ್ರಸಿದ್ಧ ಪರಂಪರೆಯ ಸಾಲಿನಲ್ಲಿರುವ ಹೊಯ್ಸಳ ರಾಜಮನೆತನವು 10 ರಿಂದ 14ನೇ ಶತಮಾನದವರೆಗೆ ಕನ್ನಡನಾಡಿನಲ್ಲಿ ಆಳ್ವಿಕೆ ನಡೆಸಿ ಇತಿಹಾಸದ ಪುಟಗಳಲ್ಲಿ ಇಂದಿಗೂ ಹಸಿರಾಗಿ ಉಳಿದಿದೆ. ಹೊಯ್ಸಳರ ಕಾಲದ ಪ್ರಮುಖ ವಿಶೇಷತೆಗಳೆಂದರೆ ವಾಸ್ತುಶಿಲ್ಪ ಕಲಾಶೈಲಿ, ದೇವಾಲಯಗಳ ನಿರ್ಮಾಣ, ಸಾಹಿತ್ಯ, ರಾಜ್ಯ ವಿಸ್ತರಣೆ, ಆಡಳಿತ ಹೀಗೆ ಹಲವು ಕ್ಷೇತ್ರಗಳಲ್ಲಿ ವೈಶಿಷ್ಟ್ಯತೆಯನ್ನು ಸಾಧಿಸಿದೆ. ಈ ರಾಜಮನೆತನದಲ್ಲಿ ವಿಷ್ಣುವರ್ಧನ (1110–1142), ಮೂರನೇ ಬಲ್ಲಾಳ ಇವರಿಬ್ಬರು ಪ್ರಸಿದ್ಧ ಅರಸರಾಗಿದ್ದಾರೆ.

ವಿಷ್ಣುವರ್ಧನ ಮೊದಲು ಜೈನಧರ್ಮೀಯನಾಗಿದ್ದನು. ಅನಂತರ ರಾಮಾನುಜಾಚಾರ್ಯರಿಂದ ಪ್ರಭಾವಿತನಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿ ವಿಷ್ಣುವರ್ಧನನಾದನು. ಈತನ ಕಾಲದಲ್ಲಿ ರಾಜ್ಯ ವಿಸ್ತರಣೆ, ಕಲೆ–ವಾಸ್ತುಶಿಲ್ಪಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಈತನ ರಾಣಿ ಶಾಂತಲೆಯು ಪ್ರಸಿದ್ಧ ನರ್ತಕಿ, ಶಿಲ್ಪಕಲೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದಳು. ಇವಳನ್ನು ಹೊಯ್ಸಳ ರಾಜ್ಯದ ಶಿವಗಂಗೆಯ ಹೆಗ್ಗಡೆ ಮಾರಸಿಂಗಮಯ್ಯ–ಮಾಚಿಕಬ್ಬೆಯ ಮಗಳೆಂದು ಈ ಕಾದಂಬರಿಯು ಪರಿಚಯಿಸುತ್ತದೆ.

ವೈ.ಕೆ. ಸಂಧ್ಯಾ ಶರ್ಮ ಅವರು ಬರೆದ 'ನೃತ್ಯಸರಸ್ವತಿ' ಎಂಬ ಕಾದಂಬರಿಯು ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯನ್ನು ಕುರಿತು ರಚಿಸಿದ ಐತಿಹಾಸಿಕ ಕಾದಂಬರಿಯಾಗಿದೆ. ಸಂಧ್ಯಾ ಅವರು ತಾವು ಕನ್ನಡ ಎಂ.ಎ. ತರಗತಿಯಲ್ಲಿದ್ದಾಗ 'ಶಾಂತಲೆಯನ್ನು ಕುರಿತ ಶಾಸನಗಳು' ಎಂಬ ವಿಷಯವನ್ನು ಕುರಿತು ಪ್ರಬಂಧವನ್ನು ಮಂಡಿಸಿದ್ದರು. ಈ ವಿಷಯದ ಬಗ್ಗೆ ಮಾಹಿತಿ ಕಲೆ ಹಾಕಲು ಅವರು ಹಲವಾರು ಶಾಸನಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದು, ಅವುಗಳಲ್ಲಿ ಶ್ರವಣಬೆಳಗೊಳದ ಬೋಕಿಮಯ್ಯನ ಶಾಸನ ಪ್ರಮುಖವಾಗಿದೆ. ಈ ಶಾಸನದ ಆಧಾರದ ಮೇಲೆಯೇ ಈ ಕಾದಂಬರಿಯು ರಚಿತವಾಗಿದೆ.

ಹೊಯ್ಸಳ ವಿಷ್ಣುವರ್ಧನನ ಅರಸಿ "ನೃತ್ಯ ಸರಸ್ವತಿ" ಶಾಂತಲೆಯ ಅನನ್ಯ ವ್ಯಕ್ತಿತ್ವದ ಚಿತ್ರಣದೊಂದಿಗೆ ಆಕೆ ಒಬ್ಬ ಸಾಮಾನ್ಯ ಹೆಣ್ಣಾಗಿ ಅನುಭವಿಸಿದ ಭಾವಸಂಘರ್ಷ, ಮಾನಸಿಕ ವಿಪ್ಲವ, ತುಮುಲಗಳನ್ನು ಮನಮುಟ್ಟುವಂತೆ ತೆರೆ ಹಿಂದೆ ಕಟ್ಟಿಕೊಡುವುದು ಖ್ಯಾತ ಚಲನಚಿತ್ರ ನಿರ್ದೇಶಕ ಶ್ರೀ ಪುಟ್ಟಣ್ಣ ಕಣಗಾಲರ ದಿವ್ಯಕನಸಾಗಿತ್ತು. ಇದನ್ನು ಸಾಕಾರಗೊಳಿಸಲು ಸಂಧ್ಯಾ ಅವರ ಬಳಿ ಚಿತ್ರಕಥೆಯನ್ನು ರಚಿಸಲು ಕೇಳಿಕೊಂಡಾಗ ಅವರ ಅಪೇಕ್ಷೆಯಂತೆ ಸಂಧ್ಯಾ ಅವರು ಚಿತ್ರಕಥೆ ರಚಿಸಿದರು. ಆದರೆ ಕಾರಣಾಂತರಗಳಿಂದ ಅದು ಚಲನಚಿತ್ರವಾಗದೆ, 'ನೃತ್ಯಸರಸ್ವತಿ' ಕಾದಂಬರಿಯಾಗಿ ರೂಪುಗೊಂಡಿತು. ಹೆಣ್ಣಾಗಿ ಅನುಭವಿಸಿದ ಶಾಂತಲೆಯ

ಒಳತೋಟಿಯ, ಅಂತರಂಗದ ಏರಿಳಿತದ ಭಾವಪೂರ್ಣ ಜೀವನಚಿತ್ರ ಇಲ್ಲಿ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ಕಾದಂಬರಿಯ ಮೊದಲ ಭಾಗವು ಶಾಂತಲೆಯ ಜೀವನದ ಉತ್ಕರ್ಷದ ಕಥೆಯಾಗಿದ್ದು, ಅನಂತರದ ಭಾಗವು ಅವಳ ಜೀವನದ ಅಪಕರ್ಷದ ಕಥೆಯಾಗಿದೆ.

ಕಥೆಯು ದೋರಸಮುದ್ರದಲ್ಲಿ ನಡೆಯುತ್ತಿದ್ದ ದೇವಾಲಯಗಳ ನಿರ್ಮಾಣ ಕಾರ್ಯವನ್ನು ಕುರಿತು ಯುವರಾಜ ವಿಷ್ಣುವರ್ಧನನು ಮೇಲ್ವಿಚಾರಣೆ ನಡೆಸುವಲ್ಲಿಂದ ಆರಂಭವಾಗುತ್ತದೆ. ಅದೇ ಸಂಜೆ ಶಿಲ್ಪಿಗಳಿಗೆ ಶಿಲ್ಪಗಳನ್ನು ಕೆತ್ತಲು, ಭಾವಭಂಗಿಗಳನ್ನು ತೋರಿಸಲು ನೃತ್ಯ ಕಾರ್ಯಕ್ರಮವನ್ನು ಸಜ್ಜುಗೊಳಿಸಲಾಗಿತ್ತು. ತಮ್ಮ ಪ್ರತಿಭೆಯನ್ನು ಪ್ರಕಟಿಸಲು ದೇಶದ ನಾನಾ ಭಾಗಗಳಿಂದ ನಾಟ್ಯಕೋವಿದೆಯರು ಆಗಮಿಸಿದ್ದರು. ಸಂಜೆಯ ಸಮಯದಲ್ಲಿ ಕಾರ್ಯಕ್ರಮ ಆರಂಭಗೊಂಡು ಅನೇಕ ನೃತ್ಯಗಾರ್ತಿಯರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದ ಒಬ್ಬ ಸುಂದರಿಯು ತನ್ನ ತಾಯಿ-ತಂದೆಯ ಬಳಿ ಅನುಮತಿಯನ್ನು ಪಡೆದು ನೃತ್ಯ ಪ್ರದರ್ಶಿಸಿದಳು. ಅವಳ ಚೆಲುವು, ಅವಳ ನಾಟ್ಯ ಪ್ರತಿಭೆ, ಅವಳ ಇಂಪಾದ ಗಾನ, ಅವಳ ಭಾವಾಭಿವ್ಯಕ್ತಿಯು ನೋಡುಗರ ಕಣ್ಮನ ಸೆಳೆಯಿತು. ಶಿಲ್ಪಿಗಳು ನೃತ್ಯದ ವಿನ್ಯಾಸಗಳನ್ನು, ಹಾವಭಾವಗಳನ್ನು, ಭಾವಾಭಿವ್ಯಕ್ತಿಯನ್ನು, ನಾಟ್ಯದ ಭಂಗಿಗಳನ್ನು ಬಟ್ಟೆ, ತಾಳೆಗರಿಗಳಲ್ಲಿ ಗುರುತು ಮಾಡಿಕೊಳ್ಳುತ್ತಿದ್ದರು. ಇತ್ತ ವಿಷ್ಣುವರ್ಧನನು ಆ ಅನುಪಮ ಸುಂದರಿಯ ನಾಟ್ಯಕಲೆಗೆ ಮನಸೋತು ಅವಳಲ್ಲಿ ಪರವಶನಾದನು. ಆ ನೃತ್ಯಗಾರ್ತಿಯೇ ಶಾಂತಲೆಯಾಗಿದ್ದಳು.

ವಿಷ್ಣುವರ್ಧನನ ತಂದೆ ಎರೆಯಂಗನು ತೀರಿಹೋದ ಮೇಲೆ ವಿಷ್ಣುವರ್ಧನನಿಗೆ ಪಟ್ಟಾಭಿಷೇಕ ಮಾಡಲು ರಾಜಮಾತೆ ಏಚಲಾದೇವಿ, ಮಂತ್ರಿವರ್ಗ ನಿರ್ಧರಿಸಿತು. ಈ ಪಟ್ಟಾಭಿಷೇಕ ಮಹೋತ್ಸವಕ್ಕೆ ಮಾರಸಿಂಗಮಯ್ಯನ ಕುಟುಂಬವನ್ನು ಸಹ ಆಹ್ವಾನಿಸಲಾಗಿತ್ತು. ಅಲ್ಲಿಗೆ ಬಂದಿದ್ದ ಶಾಂತಲೆಯ ಅನುಪಮ ಸೌಂದರ್ಯ, ವಿನಯವಂತಿಕೆ, ಪಾಂಡಿತ್ಯ-ಸದ್ಗುಣಗಳನ್ನು ನೋಡಿ ರಾಜಮಾತೆಯು ಬಹಳ ಮೆಚ್ಚಿಕೊಂಡರು. ಅಷ್ಟೇಅಲ್ಲದೆ ಈಗಾಗಲೇ ವಿಷ್ಣುವರ್ಧನನು ಶಾಂತಲೆಯನ್ನು ಮೆಚ್ಚಿರುವ ಬಗ್ಗೆ ಮಾಹಿತಿಯು ತಿಳಿದಿತ್ತು. ಇದರಿಂದ ಇವರಿಬ್ಬರಿಗೂ ವಿವಾಹ ನಿಶ್ಚಯ ಮಾಡಲಾಯಿತು. ಶಕವರ್ಷ 1344 ಶುಭಕೃತು ನಾಮಸಂವತ್ಸರದಲ್ಲಿ ಬಹುಳ ದಶಮಿ ಸೋಮವಾರದಂದು ಪ್ರಾತಃಕಾಲ ಶುಭ ಕನ್ಯಾ ಲಗ್ನದಲ್ಲಿ ಮಹಾರಾಜ ವಿಷ್ಣುವರ್ಧನನಿಗೂ ಶಾಂತಲೆಗೂ, ಉದಯಾದಿತ್ಯ ಹಾಗೂ ಚಂದಲೆಗೂ ವಿವಾಹ ಮಹೋತ್ಸವವು ನೆರವೇರಿತು. ಇದೇ ಸಂದರ್ಭದಲ್ಲಿ ಶಾಂತಲೆಯನ್ನು 'ಪಟ್ಟಮಹಿಷಿ'ಯನ್ನಾಗಿ ಮಾಡಲು ವಿಷ್ಣುವರ್ಧನನು ನಿರ್ಧರಿಸಿದಾಗ ಅದನ್ನು ಶಾಂತಲೆಯು ವಿನಯವಾಗಿಯೇ ನಿರಾಕರಿಸಿದಳು.

ವಿಷ್ಣುವರ್ಧನನಿಗೆ ರಾಜ್ಯಭಾರದಿಂದ ಹಿಡಿದು ಕಂದಾಯ, ನ್ಯಾಯ, ಆಡಳಿತ

ವ್ಯವಸ್ಥೆ, ದೇವಾಲಯ ನಿರ್ಮಾಣ ಹೀಗೆ ಸಮಸ್ತ ಕಾರ್ಯಗಳಲ್ಲಿಯೂ ಶಾಂತಲೆ ನೆರವಾಗುತ್ತಿದ್ದಳು. "ಪತಿಹಿತ ಶಾಂತಲಾದೇವಿಯ ರೂಪ ಕಲ್ಪವಲ್ಲರಿ ವಿಷ್ಣುನೃಪನೆಂಬ ಸಮುನ್ನತ ಕಲ್ಪವೃಕ್ಷ"ವನ್ನು ಹಬ್ಬಿದಂತಿರುವ ಇವರ ಅನನ್ಯತೆಯನ್ನು ಬೋಕಿಮಯ್ಯನು ಶಾಸನದಲ್ಲಿ ಬಣ್ಣಿಸಿದ್ದಾನೆ. ಹೊಯ್ಸಳನಾಡು ಎಂದರೆ ಶಾಂತಲೆ; ಶಾಂತಲೆ ಎಂದರೆ ಹೊಯ್ಸಳನಾಡು ಎನ್ನುವಷ್ಟರಮಟ್ಟಿಗೆ ಜನಪ್ರಿಯವಾಗಿ ಶಾಂತಲೆಯು ನಾಡಿನ 'ಪುಣ್ಯದೇವತೆ'ಯಾಗಿ ಮಾತೃ ವಾತ್ಸಲ್ಯದಿಂದ ಪ್ರಜಾಪಾಲನೆ ಮಾಡುತ್ತಾ, ಜನತೆಯ ಮನೆ ಮನಗಳನ್ನು ಬೆಳಗುತ್ತಿದ್ದಳು.

ಹೀಗಿರುವಾಗ ಉದಯಾದಿತ್ಯನ ಪತ್ನಿ ಚಂದಲೆಯು ಗರ್ಭಿಣಿಯಾದಳು. ಜೊತೆಯಲ್ಲಿಯೇ ಮದುವೆಯಾದ ಶಾಂತಲೆಗೆ ತಾಯಿಯಾಗುವ ಯಾವುದೇ ಲಕ್ಷಣಗಳು ಇನ್ನೂ ಕಾಣಿಸುತ್ತಿರಲಿಲ್ಲ. ಇದರ ಬಗ್ಗೆ ಶಾಂತಲೆಯು ತೀವ್ರವಾಗಿ ಯೋಚಿಸುತ್ತಾ ಮನದಲ್ಲಿಯೇ ಕೊರಗುತ್ತಿದ್ದಳು. ಮಗುವಿನ ವಿಚಾರವಾಗಿ ವಿಷ್ಣುವರ್ಧನ ಹಾಗೂ ರಾಜಮಾತೆ ಇಬ್ಬರಿಗೂ ಸಹ ಬೇಸರವಿದ್ದರೂ, ಇದನ್ನು ವ್ಯಕ್ತಪಡಿಸಿದರೆ ಶಾಂತಲೆಗೆ ನೋವಾಗುವುದೆಂದು ತಿಳಿದು ತಮ್ಮ ನೋವನ್ನು ತೋರಿಸಿಕೊಳ್ಳುತ್ತಿರಲಿಲ್ಲ. ಚಂದಲೆಯನ್ನು ಶಾಂತಲೆಯು ಪ್ರೀತಿಯಿಂದ ನೋಡಿಕೊಳ್ಳುತ್ತಾ, ತನ್ನ ಸ್ವಂತ ತಂಗಿಯಂತೆ ಆರೈಕೆ ಮಾಡುತ್ತಿದ್ದಳು. ಆದರೆ ದುರಾದೃಷ್ಟವಶಾತ್ ಹೆರಿಗೆಯಲ್ಲಿ ಚಂದಲೆ ಹಾಗೂ ಮಗು ಇಬ್ಬರೂ ಸಾವನ್ನಪ್ಪಿದರು. ಇದರಿಂದ ಶಾಂತಲೆ, ವಿಷ್ಣುವರ್ಧನ ಹಾಗೂ ರಾಜಮಾತೆಗೆ ದುಃಖದಿಂದ ಜಂಘಾಬಲವೇ ಕುಸಿದಂತಾಯಿತು. ಹೆಂಡತಿ ಹಾಗೂ ಮಗುವಿನ ಅನಿರೀಕ್ಷಿತ ಸಾವಿನಿಂದ ಉದಯಾದಿತ್ಯನು ವಿರಕ್ತನಾಗಿ ಶ್ರೀರಂಗಪಟ್ಟಣದ ನಿರ್ಮಾಣ ಕಾರ್ಯಕ್ಕಾಗಿ ಪ್ರಯಾಣ ಬೆಳೆಸಿದನು.

ಶಾಂತಲೆಯು ಹೊಯ್ಸಳ ರಾಜ್ಯದ ಭವಿಷ್ಯದ ಬಗ್ಗೆ ಸದಾ ಸದ್ವಿಚಾರಗಳನ್ನು ಯೋಚಿಸುತ್ತಿದ್ದಳು. ತನಗೆ ಜನರ ಅಪವಾದವು ತಪ್ಪಬೇಕು, ಮಹಾರಾಜರಿಗೆ ಸಂತಾನ ಭಾಗ್ಯವು ಲಭಿಸಿ, ಹೊಯ್ಸಳ ವಂಶವು ಪಲ್ಲವಿಸಬೇಕೆಂದು ಚಿಂತನೆ ಮಾಡುತ್ತಿದ್ದಳು. ಇದೇ ವೇಳೆ ಹೊಯ್ಸಳರ ಶತ್ರುವಾದ ಚೋಳರಾಜನು ಪಲ್ಲವರಸ ಗೋವಿಂದರಾಜನಿಗೆ ಆಮಿಷ ನೀಡಿ ಒಲಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಈ ವಿಚಾರವು ಶಾಂತಲೆಗೆ ತಿಳಿಯಿತು. ಗೋವಿಂದರಾಜನ ಏಕಮಾತ್ರ ಪುತ್ರಿಯಾದ ಬಮ್ಮಲೆಯನ್ನು ವಿಷ್ಣುವರ್ಧನನಿಗೆ ಮದುವೆ ಮಾಡಲು ನಿರ್ಧರಿಸಿದಳು. ವಿಷ್ಣುವರ್ಧನನ ರಾಣಿ ಆಗಬೇಕೆಂಬ ಆಸೆಯಿಂದ ಬಮ್ಮಲೆಯೂ ಸಹ ಕನ್ಯೆಯಾಗಿ ಉಳಿದಿದ್ದಳು. ಆದ್ದರಿಂದ ರಾಜತಾಂತ್ರಿಕ ಸಂಬಂಧವಾಗಿ, ನಾಡಿನ ಕ್ಷೇಮಕ್ಕಾಗಿ, ಬಮ್ಮಲೆಯ ಬಯಕೆಯ ಈಡೇರಿಕೆಗಾಗಿ ವಿಷ್ಣುವರ್ಧನನಿಗೆ ಬಮ್ಮಲೆಯ ಜೊತೆ ಮದುವೆ ಮಾಡಿಸಲು ಶಾಂತಲೆಯು ದೃಢನಿಶ್ಚಯ ಮಾಡಿದಳು.

ಇದಕ್ಕೆ ಮಹಾರಾಜ ವಿಷ್ಣುವರ್ಧನನು ಒಪ್ಪದಿದ್ದಾಗ ಶಾಂತಲೆಯು ಪದೇ ಪದೇ ಒತ್ತಾಯ ಮಾಡುತ್ತಿದ್ದಳು. ಕೊನೆಗೆ ವಿಷ್ಣುವರ್ಧನನು ಇದರಿಂದ ತಪ್ಪಿಸಿಕೊಳ್ಳಲು

ಶಾಂತಲೆಗೆ ನೀನು ಪಟ್ಟಮಹಿಷಿಯಾಗಲು ಒಪ್ಪಿದರೆ ನಾನು ಬಮ್ಮಲೆಯನ್ನು ವಿವಾಹವಾಗುವೆನೆಂಬ ಷರತ್ತನ್ನು ಮುಂದಿಟ್ಟನು. ಹೊಯ್ಸಳ ವಂಶದ ಉದ್ಧಾರಕ್ಕಿಂತ ಯಾವುದು ದೊಡ್ಡದಲ್ಲ ಎಂದು ಯೋಚಿಸಿ ಶಾಂತಲೆಯು ವಿಷ್ಣುವರ್ಧನನ ಷರತ್ತಿಗೆ ಒಪ್ಪಿದಳು. ಅದರಂತೆ ಮದುವೆ ವಿವಾಹ ಮಹೋತ್ಸವವು ದೋರಸಮುದ್ರದಲ್ಲಿಯೇ ವೈಭವೋಪೇತವಾಗಿ ನಡೆಯಬೇಕೆಂದು ರಾಜಮಾತೆಯು ಪಲ್ಲವರಸ ಗೋವಿಂದರಾಜರ ಬಳಿ ನಿವೇದಿಸಿಕೊಂಡರು. ಇದಕ್ಕೆ ಒಪ್ಪಿ ಪಲ್ಲವರ ಪರಿವಾರ ಏಳು ದಿನ ಮುಂಚಿತವಾಗಿಯೇ ದೋರಸಮುದ್ರಕ್ಕೆ ಆಗಮಿಸಿದರು. ಮದುವೆಗೆ ಮೂರು ದಿನ ಮುಂಚಿತವಾಗಿಯೇ ಶಾಂತಲೆಯ 'ಪಟ್ಟಮಹಿಷಿಧಾರಣ ಮಹೋತ್ಸವ'ವು ವಿಜೃಂಭಣೆಯಿಂದ ನಡೆಯಿತು. ಮೊದಲಿನಿಂದಲೂ ಶಾಂತಲೆಯ ಅದೃಷ್ಟದ ಬಗ್ಗೆ, ಅವಳ ಸ್ಥಾನಮಾನದ ಬಗ್ಗೆ ಈರ್ಷೆ ಹೊಂದಿರುವ ಬಮ್ಮಲೆಗೆ ಶಾಂತಲೆಗೆ ಪಟ್ಟಮಹಿಷಿಯ ಅಧಿಕಾರ ಸಿಗುತ್ತಿರುವುದು ನುಂಗಲಾರದ ತುತ್ತಾಯಿತು. ವಿಷ್ಣುವರ್ಧನ ಬಮ್ಮಲೆಯ ವಿವಾಹದ ಸಂದರ್ಭದಲ್ಲಿಯೇ ಶಾಂತಲೆಯು 'ಗರ್ಭಿಣಿ' ಎಂಬ ವಿಚಾರ ತಿಳಿದು ನಾಡಿನ ಜನತೆಯು ಸಂತೋಷದಿಂದ ಸಂಭ್ರಮಿಸಿತು.

ಬಮ್ಮಲೆಗೆ ಭೈರಬ್ಬೆ ಎಂಬ ದಾಸಿಯಿದ್ದಳು. ರಾಮಾಯಣದಲ್ಲಿ ಕೈಕೇಯಿ ದಾಸಿಯಾಗಿದ್ದ ಮಂಥರೆಯ ಪಾತ್ರವನ್ನು ಹೋಲುತ್ತದೆ. ಬಮ್ಮಲೆಯ ಏಳಿಗೆಯೇ ತನ್ನ ಜೀವನದ ಗುರಿ ಎಂಬ ಆಷಾಡಭೂತಿತನ ತೋರುತ್ತಾ ಸ್ವಹಿತಸಾಧನೆಗಾಗಿ ಬಮ್ಮಲೆಯ ಮನಸ್ಸಿನ ಮೇಲೆ ಶಾಂತಲೆಯ ಬಗ್ಗೆ ವಿಷಬೀಜ ಬಿತ್ತಿದವಳು. ಬಮ್ಮಲೆಯ ಮಗ ಬಲ್ಲಾಳನು ಯುವರಾಜನಾದರೆ ಬಮ್ಮಲೆಯು ರಾಜಮಾತೆಯಾಗುತ್ತಾಳೆ. ಆ ಮೂಲಕ ತನ್ನ ಸ್ಥಾನ ಮತ್ತಷ್ಟು ಎತ್ತರಕ್ಕೆ ಹೋಗುತ್ತದೆ ಎಂಬ ದುರಾಸೆಯಿಂದ ಶಾಂತಲೆಯ ಪುತ್ರ ಬಿಟ್ಟಿಯಣ್ಣನನ್ನು ತನ್ನ ತಮ್ಮ ಮಾಯಣ್ಣನ ಸಹಾಯದಿಂದ ಮತ್ತೇರಿದ ಕುದುರೆ ಸವಾರಿಯ ಮೂಲಕ ಸಾಯಿಸುವ ಸಂಚು ಹೂಡಿದವಳು. ಬಮ್ಮಲೆಯ ಮೂಲಕ ಶಾಂತಲೆಯ ಬದುಕಿನ ಅಪಕರ್ಷತೆಗೆ ಕಾರಣಳಾದ ದುಷ್ಟ ಬುದ್ಧಿಯವಳು.

ಶಾಂತಲೆಯು ಗರ್ಭಿಣಿ ಎಂದು ತಿಳಿದ ಮೇಲೆ ವಿಷ್ಣುವರ್ಧನನು ಅವಳ ಬಳಿಯೇ ಹೆಚ್ಚಿನ ಸಮಯವನ್ನು ಕಳೆಯುತ್ತಿದ್ದನು. ಈ ಮಧ್ಯೆ ಕೇತುಮಲ್ಲನ ಕನಸಾದ "ಹೊಯ್ಸಳೇಶ್ವರ-ಶಾಂತಲೇಶ್ವರ" ದೇವಾಲಯಗಳ ವಾಸ್ತುಶಿಲ್ಪದ ರೂವಾರಿಯನ್ನು ಸಹ ಶಾಂತಲೆಯು ವಹಿಸಿಕೊಂಡಿದ್ದಳು. ಮುಂದೆ ಶಾಂತಲೆಗೆ ಗಂಡುಮಗು ಜನಿಸಿ ಅದಕ್ಕೆ "ಬಿಟ್ಟಿಯಣ್ಣ" ಎಂದು ನಾಮಕರಣ ಮಾಡಿದರೆ, ಬಮ್ಮಲೆಯು ಗರ್ಭಿಣಿಯಾಗಿ ಹೆಣ್ಣು ಮಗುವಿಗೆ ಜನ್ಮವಿತ್ತು ಅದಕ್ಕೆ "ಪದ್ಮಲೆ" ಎಂಬ ಹೆಸರನ್ನಿಟ್ಟಳು. ಜೊತೆಜೊತೆಗೆ ಬಮ್ಮಲೆಯ ದಾಸಿ ಭೈರಬ್ಬೆಯು ಶಾಂತಲೆಯ ಬಗ್ಗೆ ಬಮ್ಮಲೆಯ ಮನಸ್ಸಿನಲ್ಲಿ ವಿಷಬೀಜ ಬಿತ್ತುತ್ತಿದ್ದಳು. ಭೈರಬ್ಬೆಯ ದುರ್ಬೋಧನೆಗಳು, ತನ್ನ ಮನಸ್ಸಿನಲ್ಲಿ ಶಾಂತಲೆಯ ಬಗ್ಗೆ ಇದ್ದ ಅಸಮಾಧಾನವು ದ್ವೇಷವಾಗಿ ಮಾರ್ಪಟ್ಟಿತು.

ಇದರ ಪರಿಣಾಮವಾಗಿ ಬಮ್ಮಲೆಯೂ ಸಹ ಅವಕಾಶ ಸಿಕ್ಕಾಗಲೆಲ್ಲ

ಮಹಾರಾಜ ವಿಷ್ಣುವರ್ಧನನಿಗೆ ಶಾಂತಲೆಯ ಮೇಲೆ ದ್ವೇಷ ಮೂಡುವಂತೆ ಮಾಡುತ್ತಿದ್ದಳು. ಶಾಂತಲೆಯ ಪ್ರತಿಕಾರ್ಯದಲ್ಲಿಯೂ ತಪ್ಪುಗ್ರಹಿಕೆಯನ್ನು ರಾಜನಿಗೆ ಮೂಡಿಸುತ್ತಾ, ಶಾಂತಲೆಯು ಉದ್ಧಟತನ ಹಾಗೂ ಅಹಂಕಾರದಿಂದ ವರ್ತಿಸುತ್ತಿದ್ದಾಳೆ ಎಂಬಂತೆ ಚಿತ್ರಿಸುತ್ತಿದ್ದಳು. ಕ್ರಮೇಣ ರಾಜಕಾರ್ಯ, ಧರ್ಮಕಾರ್ಯ, ಆಡಳಿತ ಹೀಗೆ ಪ್ರತಿಯೊಂದು ಕಾರ್ಯದಲ್ಲಿಯೂ ವಿಷ್ಣುವರ್ಧನನು ಶಾಂತಲೆಯನ್ನು ನಿರ್ಲಕ್ಷಿಸುತ್ತಿದ್ದನು. ಬಿಟ್ಟಿಯಣ್ಣನು ರಣರಂಗದಲ್ಲಿ ಹತ್ಯೆಯಾದಾಗ ರಾಜಮಾತೆಯು ಸಹ ಇದನ್ನು ನೋಡಿ ದೈವಾಧೀನರಾದರು. ಈ ವೇಳೆ ಮತ್ತೊಂದು ಯುದ್ಧದಲ್ಲಿ ನಿರತನಾಗಿದ್ದ ವಿಷ್ಣುವರ್ಧನನು ವಿಜಯಿಯಾಗಿ ಅರಮನೆಗೆ ಮರಳಿ ಬಂದಾಗ ಸುದ್ದಿ ತಿಳಿದು ತಾಯಿ ಮಗನ ಸಾವಿಗೆ ಶಾಂತಲೆಯೇ ಕಾರಣ ಎಂದು ತಪ್ಪು ಗ್ರಹಿಸಿ ಆಕೆಯ ಮೇಲೆ ಮತ್ತಷ್ಟು ಮುಳಿದನು. ವಿಷ್ಣುವರ್ಧನ ಹಾಗೂ ಶಾಂತಲೆಯ ನಡುವಿನ ಕಂದರ ಹೆಚ್ಚಾಗುತ್ತಾ ಹೋದಂತೆ ವಿಷ್ಣುವರ್ಧನನಿಗೆ ಬಮ್ಮಲೆಯೂ ಹತ್ತಿರವಾಗುತ್ತಾ ಹೋದಳು. ಶಾಂತಲೆಯು ತ್ಯಜಿಸಿದ ಸ್ಥಾನಮಾನಗಳೆಲ್ಲ ಬಮ್ಮಲೆಯ ಪಾಲಾಗುತ್ತಿದ್ದವು.

ವಿಷ್ಣುವರ್ಧನನ ತಾತ್ಸಾರ, ಪುತ್ರಶೋಕ, ರಾಜಮಾತೆಯ ಸಾವು, ಬಮ್ಮಲೆಯ ಚುಚ್ಚುನುಡಿ ಇವುಗಳೆಲ್ಲವೂ ಸೇರಿ ಶಾಂತಲೆಯ ಬದುಕನ್ನು ಛಿದ್ರಗೊಳಿಸುತ್ತಿದ್ದವು. ಅಧಿಕಾರ, ಅರಮನೆ ಯಾವುದೂ ಬೇಡವಾಗಿ ತನ್ನ ತಾಯಿಯ, ತವರೂರು ಶಿವಗಂಗೆಯ ನೆನಪು ಶಾಂತಲೆಯನ್ನು ತೀವ್ರವಾಗಿ ಸೆಳೆಯುತ್ತಿತ್ತು. ಎಲ್ಲವನ್ನು ತ್ಯಜಿಸಿ ಶಿವಗಂಗೆಗೆ ತೆರಳಿ ಅಲ್ಲಿಯೇ 'ಸಲ್ಲೇಖನ ಉಪವಾಸ ವ್ರತ' ಸ್ವೀಕರಿಸಿ 'ಜಿನನಾಥ ತನಗೆಂದುಮಿಷ್ಟದೈವಂ" ಎಂಬುದನ್ನು ಸಾಕ್ಷಾತ್ಕರಿಸಿಕೊಂಡು ತನ್ನ ದೇಹವನ್ನು ತ್ಯಜಿಸುವ ದೃಢನಿಶ್ಚಯ ಮಾಡಿದಳು. ಶಿವಗಂಗೆಗೆ ಹೋಗುವ ತನ್ನ ನಿರ್ಧಾರವನ್ನು ವಿಷ್ಣುವರ್ಧನನಿಗೆ ತಿಳಿಸಿದಳು. ಆಗಲೂ ಸಹ ವಿಷ್ಣುವರ್ಧನನು ನಿರ್ಭಾವದಿಂದ ಇದ್ದು ಅವಳನ್ನು ತಡೆಯುವ ಯಾವ ಪ್ರಯತ್ನವನ್ನು ಮಾಡಲಿಲ್ಲ. ಈ ವರ್ತನೆಯು ಶಾಂತಲೆಯ ಹೃದಯಕ್ಕೆ ನೋವಿನ ಸಾವಿರ ಛಳಕನ್ನು ನೀಡಿದಂತಾಯಿತು. ಕೊನೆಗೆ ಪುರದ ಪುಣ್ಯ ನಿಷ್ಕ್ರಮಿಸುವಂತೆ ಶಾಂತಲೆಯು ನಿರ್ಗಮಿಸುವಾಗ ಬೋಕಿಮಯ್ಯನು ಸೇರಿದಂತೆ ಪುರದ ಜನತೆಯೇ ಅವಳನ್ನು ಹಿಂಬಾಲಿಸಿ ಹೊರಟರು. ದೋರಸಮುದ್ರಕ್ಕೆ ದೋರಸಮುದ್ರವೇ ಖಾಲಿಯಾಗಿ ಸ್ಮಶಾನಮೌನ ಆವರಿಸಿತು.

ಕಾದಂಬರಿಯಲ್ಲಿ ಶಾಂತಲೆಯ ಕಥೆಯೇ ಪ್ರಮುಖವಾಗಿದ್ದರೂ, ಅದರ ಸುತ್ತ ಹೊಯ್ಸಳ ರಾಜ್ಯದ ಅನೇಕ ವಿಚಾರಗಳು ಗೋಚರಿಸುತ್ತವೆ. ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಾದಂಬರಿಯಲ್ಲಿ ಲೇಖಕರು ಶಾಂತಲೆಯ ಮೂಲಕ ಹೊಯ್ಸಳ ರಾಜ್ಯದ ಬಗ್ಗೆ ಕಟ್ಟಿಕೊಟ್ಟಿರುವ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಬೆಳಕಿಗೆ ಬರುತ್ತವೆ. ಈ ಮೂಲಕ ಶಾಂತಲೆಯ ಜೀವನದೊಂದಿಗೆ ಹೊಯ್ಸಳ ರಾಜ್ಯದ ಇತರೆ ವಿಚಾರಗಳನ್ನು ಸಹ ಲೇಖಕರ ಕಲ್ಪನೆ ಹಾಗೂ ಶಾಸನಗಳ ಆಧಾರದ ಮೇಲೆ ರಚಿತವಾಗಿರುವ ಈ ಕಾದಂಬರಿಯು ಚಿತ್ರಿಸುತ್ತದೆ.

**ರಾಜಕೀಯ ಚಿತ್ರಣ:** ಹೊಯ್ಸಳ ವಂಶವು ಕರ್ನಾಟಕದ ಪ್ರಮುಖ

ರಾಜಮನೆತನವಾಗಿದ್ದು, ವಿಷ್ಣುವರ್ಧನನು ಈ ವಂಶದ ಪ್ರಖ್ಯಾತ ಅರಸನಾಗಿದ್ದಾನೆ. ಇವನ ಕಾಲವು ಆಡಳಿತ ವ್ಯವಸ್ಥೆ, ಸಾಮ್ರಾಜ್ಯ ವಿಸ್ತರಣೆ, ಕಂದಾಯ ಪದ್ಧತಿ, ಸೈನ್ಯ ಪದ್ಧತಿ ಮುಂತಾದ ರಾಜಕೀಯ ಅಂಶಗಳಿಂದ ಪ್ರಸಿದ್ಧಿ ಪಡೆದಿತ್ತು.

**ಸಾಮ್ರಾಜ್ಯ ವಿಸ್ತರಣೆ:** ಸಾಮ್ರಾಜ್ಯವು ವೈವಾಹಿಕ ಸಂಬಂಧಗಳಿಂದ, ಯುದ್ಧಗಳಿಂದ ವಿಸ್ತರಣೆಯಾಗುತ್ತಿತ್ತು ಎಂಬ ಅಂಶವನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ.

**ವೈವಾಹಿಕ ಸಂಬಂಧಗಳು:** ಚಾಲುಕ್ಯರ ದೋರಸಮುದ್ರದ ಉತ್ತರ ಗಡಿಯಲ್ಲಿ ಕೋಟೆಯಂತಿದ್ದ ಹೆಂಜೇರು ಎಂಬ ಸ್ಥಳವನ್ನು ದಾಟಿಯೇ ಹೊಯ್ಸಳನಾಡಿಗೆ ಬರಬೇಕಾಗಿದ್ದು, ಅದು ಬಿಟ್ಟರೆ ಸುತ್ತುಮಾರ್ಗ. ಹೆಂಜೇರು ಸ್ಥಳದ ಮಾಂಡಳಿಕ ವೀರಸಂಗನ ಮಗಳಾದ ಚಂದಲೆಯನ್ನು ವಿಷ್ಣುವರ್ಧನನ ಸಹೋದರ ಉದಯಾದಿತ್ಯನೊಂದಿಗೆ ವಿವಾಹ ಮಾಡುವ ಮೂಲಕ ಗಡಿನಾಡ ಮಾಂಡಳಿಕರನ್ನು ಸಂಬಂಧದಿಂದ ಬೆಸೆದು ವೈರಿಗಳನ್ನು ನಿಷ್ಕಂಟರಾಗಿಸಿಕೊಳ್ಳುವ ಶಾಂತಲೆಯ ಜಾಣ್ಮೆಸಲಹೆಯು ಆಕೆ 'ವಿವೇಕೈಕ ಬೃಹಸ್ಪತಿ' ಎಂಬುದನ್ನು ನಿರೂಪಿಸಿತು. ಪಲ್ಲವರಸ ಗೋವಿಂದರಾಜನ ಮಗಳಾದ ಬಮ್ಮಲೆಯನ್ನು ವಿಷ್ಣುವರ್ಧನನೊಂದಿಗೆ ಮದುವೆ ಮಾಡಿಸಿ ಶಾಂತಲೆಯು ಚೋಳರಿಂದ ರಾಜ್ಯಕ್ಕೆ ರಕ್ಷಣೆಯನ್ನೊದಗಿಸಲು ಮತ್ತು ಹೊಯ್ಸಳ ರಾಜ್ಯವನ್ನು ಉದ್ದರಿಸಲು ಈ ತೀರ್ಮಾನವನ್ನು ಕೈಗೊಂಡಳು. ಸಾಮ್ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ವಿಷ್ಣುವರ್ಧನನು ದೇವಕಿ, ರಾಜಲೆ, ಬಿಜ್ಜಲೆಯರನ್ನು ವಿವಾಹವಾದನು.

**ಯುದ್ಧಗಳು:** ಕೇತುಮಲ್ಲನ ಸಿರಿವಂತಿಕೆಯ ಮೇಲೆ ಕಣ್ಣುಬಿದ್ದ ತಲಕಾಡಿನ ಗಂಗರಸ ದಾಮೋದರನ ಕಿರುಕುಳವನ್ನು ತಾಳಲಾರದೆ ಕೇತುಮಲ್ಲನು ವಿಷ್ಣುವರ್ಧನನ ಆಶ್ರಯವನ್ನು ಪಡೆದನು. ಹೊಯ್ಸಳರ ಮೇಲೆ ದಾಳಿ ಮಾಡುವ ದಾಮೋದರನ ಯೋಜನೆಯನ್ನು ಕೇತುಮಲ್ಲನಿಂದ ವಿಷ್ಣುವರ್ಧನನು ತಿಳಿದು ತಲಕಾಡಿಗೆ ಲಗ್ಗೆಯಿಟ್ಟನು. ಹಲವಾರು ದಿನಗಳ ಭೀಕರ ಯುದ್ಧದ ನಂತರ ವಿಷ್ಣುವರ್ಧನ ವಿಜಯಿಯಾದನು. ದಾಮೋದರನು ಕೇತುಮಲ್ಲನಿಂದ ಹತ್ಯೆಯಾದನು. ಚೋಳಸಾಮಂತರ ಆದಿಯಮನು ವಿಷ್ಣುವರ್ಧನನಿಂದ ತಪ್ಪಿಸಿಕೊಂಡನು. ಚೋಳಸಾಮಂತ ನರಸಿಂಹವರ್ಮನನ್ನು ಕೊಂದು ಕಂಚಿಯ ಮಧುರೈವರೆಗೂ ತನ್ನ ವಿಜಯಯಾತ್ರೆಯನ್ನು ಮುಂದುವರಿಸಿದನು. ಚೋಳರ ಮತ್ತೊಬ್ಬ ಸಾಮಂತ ಜಗದ್ದೇವನನ್ನು ಯುದ್ಧದಲ್ಲಿ ವಿಷ್ಣುವರ್ಧನನು ಸೋಲಿಸಿದನು. ಈ ಯುದ್ಧದಿಂದ ಕೋಳಾಲಪುರ, ನಂಗಲಿ, ನೊಳಂಬವಾಡಿ, ಗಂಗವಾಡಿ, ಚೇರರ ರಾಯರಪುರ ಹೊಯ್ಸಳ ಸಾಮ್ರಾಜ್ಯದ ತೆಕ್ಕೆಗೊಳಪಟ್ಟವು. ಈ ಅಂಶವನ್ನು ಲೇಖಕರು ಕ್ರಿ.ಶ.1117ಕ್ಕೆ ಸೇರಿರುವ ಮಂಡ್ಯ ಜಿಲ್ಲೆಯ ತಿಪ್ಪೂರಿನ ಶಾಸನದಿಂದ ತೆಗೆದುಕೊಂಡಿದ್ದಾರೆ. ಚಾಲುಕ್ಯ ಪೆರ್ಮಾಡಿ ವಿರುದ್ಧದ ಯುದ್ಧದಲ್ಲಿ ಹೋರಾಡಿ ವಿಷ್ಣುವರ್ಧನನು ಜಯಗಳಿಸಿದನು. ಈ ವೇಳೆ ಚೋಳರ ಸಾಮಂತರ ಜಗದ್ದೇವನ ಸೇನೆಯು ಹೊಯ್ಸಳರ ವೈರಿ

ಆದಿಯಮನ ಸೈನ್ಯದ ಬೆಂಬಲ ಪಡೆದು ರಾತ್ರಿವೇಳೆ ದೋರಸಮುದ್ರಕ್ಕೆ ಅನಿರೀಕ್ಷಿತವಾಗಿ ಲಗ್ಗೆ ಇಟ್ಟಿತು. ಇದರಲ್ಲಿ ಶಾಂತಲೆಯ ಪುತ್ರ ಬಿಟ್ಟಿಯಣ್ಣನು ಜಗದ್ದೇವನಿಂದ ಹತ್ಯೆಯಾದನು. ಮರುದಿನ ಬಿಟ್ಟಿಯಣ್ಣನ ಗರುಡನಾದ ಪ್ರಧಾನಿ ಗಂಗರಾಜನ ಮಗ ಬೊಪ್ಪಣನು ಜಗದ್ದೇವನನ್ನು ಕೊಂದು ಪ್ರತೀಕಾರವನ್ನು ಪೂರೈಸಿ ತನ್ನ ಪ್ರಾಣತ್ಯಾಗವನ್ನು ಮಾಡಿದ.

**ಆಡಳಿತ ವ್ಯವಸ್ಥೆ:** ಹೊಯ್ಸಳರ ಆಡಳಿತ ವ್ಯವಸ್ಥೆಯು ಕೇಂದ್ರೀಕೃತ–ವಿಕೇಂದ್ರಿಕೃತ ಆಡಳಿತದ ಮಿಶ್ರಣವಾಗಿತ್ತು. ರಾಜನು ಸರ್ವೋಚ್ಚ ಆಡಳಿತಗಾರನಾಗಿದ್ದನು. ಮಹಾರಾಜ–ಪ್ರಧಾನಮಂತ್ರಿ–ಸೇನಾಧಿಪತಿ–ಪ್ರಾಂತೀಯಾಧಿಕಾರಿ–ಹೆಗ್ಗಡೆ–ಮುಖಂಡ ಈ ಕ್ರಮದಲ್ಲಿ ಆಡಳಿತ ವ್ಯವಸ್ಥೆ ಇತ್ತು. ಈ ಕಾದಂಬರಿಯಲ್ಲಿ ಪ್ರಧಾನಿ ಗಂಗರಾಜರಾಗಿದ್ದು, ಹೆಗ್ಗಡೆ ಶಾಂತಲೆಯ ತಂದೆ ಮಾರಸಿಂಗಯ್ಯ. ಇವರನ್ನು ಹೆಗ್ಗಡೆಯಿಂದ ಪೆರ್ಗಡೆಗೆ ರಾಜಮಾತೆಯು ಹುದ್ದೆಯನ್ನು ಉನ್ನತೀಕರಿಸಿದ್ದರು. ಅಧಿಕಾರ ದುರುಪಯೋಗವಾಗುತ್ತಿದೆ ಎಂಬ ಭೈರಬ್ಬೆ ಹಾಗೂ ಬಮ್ಮಲೆಯ ಆರೋಪಗಳನ್ನು ಕೇಳಲಾಗದೆ ಶಾಂತಲೆಯು ಮತ್ತೆ ತನ್ನ ತಂದೆಯವರ ಸ್ಥಾನವನ್ನು ಪೆರ್ಗಡೆಯಿಂದ ಹೆಗ್ಗಡೆಗೆ ಇಳಿಸಿದಳು. ಆಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಮಂಥನಶಾಲೆಯಲ್ಲಿ ಮಂತ್ರಾಲೋಚನೆ ನಡೆಸಿ ತೀರ್ಮಾನ ಕೈಗೊಳ್ಳಲಾಗುತ್ತಿತ್ತು. ಶಾಂತಲೆ ಈ ಕಾದಂಬರಿಯಲ್ಲಿ ಮಹಾರಾಜ ವಿಷ್ಣುವರ್ಧನನು ಗಡಿನಾಡ ರಕ್ಷಣೆ, ದಂಗೆಕೋರರ ಅಡಗಿಸುವಿಕೆ, ರಾಜ್ಯವಿಸ್ತರಣೆಗಳ ಕಡೆ ಗಮನಹರಿಸಿದಾಗ, ಶಾಂತಲೆಯು ಮಹಾರಾಜ ವಿಷ್ಣುವರ್ಧನನಿಗೆ ರಾಜ್ಯಾಡಳಿತವನ್ನು ಸರಿಸಮನಾಗಿ ನಿರ್ವಹಿಸುತ್ತಿದ್ದಳು. ಹೊಸಹೊಸ ಯೋಜನೆಗಳನ್ನು ರೂಪಿಸಿ ಅದರ ಬಗ್ಗೆ ಆಡಳಿತವರ್ಗ ಹಾಗೂ ಮಂತ್ರಿಮಂಡಲದ ಜೊತೆ ಚರ್ಚಿಸಿ ಅವರ ಸಲಹೆಯಂತೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದ್ದಳು. ಇದರಿಂದ ರಾಜ್ಯದಲ್ಲಿ ಕಲ್ಯಾಣ ಕಾರ್ಯಕ್ರಮಗಳು ಆರಂಭವಾಗಿ ನಾಡಿನಲ್ಲಿ ಬಡತನ, ನಿರುದ್ಯೋಗವನ್ನು ನಿರ್ಮೂಲನೆ ಮಾಡಿ ಶಾಂತಲೆಯು ಜನರ 'ಪುಣ್ಯದೇವತೆ'ಯಾಗಿ ಆಡಳಿತ ನಡೆಸುತ್ತಿದ್ದಳು.

**ಕಂದಾಯ ವ್ಯವಸ್ಥೆ:** ಕೃಷಿಯ ಮೇಲಿನ ತೆರಿಗೆಯು ರಾಜ್ಯದ ಪ್ರಮುಖ ಆದಾಯದ ಮೂಲವಾಗಿತ್ತು. ಕಲ್ಯಾಣ ಕಾರ್ಯಗಳಿಗೆ ಖಾಲಿಯಾಗಿರುವ ಭಂಡಾರವನ್ನು ರಕ್ಷಿಸಲು ಹೊಸ ಕಂದಾಯಗಳನ್ನು ಜಾರಿಗೊಳಿಸಲು, ಕೃಷಿಯ ಮೇಲೆ ಹೆಚ್ಚಿನ ತೆರಿಗೆ ವಿಧಿಸಲು ಮಹಾರಾಜ ವಿಷ್ಣುವರ್ಧನನ ನೇತೃತ್ವದ ಮಂತ್ರಿವರ್ಗವು ನಿರ್ಧರಿಸಿ ತಮ್ಮ ನಿಲುವನ್ನು ಶಾಂತಲೆಗೆ ಪ್ರಕಟಿಸಿದರು. ಇದನ್ನು ಎಲ್ಲಾ ಕೋನಗಳಿಂದ ಪರಾಮರ್ಶಿಸಿ ಶಾಂತಲೆಯು ಚಾಲುಕ್ಯರ ಜಗದ್ದೇವನ ಆಡಳಿತದಿಂದ ನರಳಿರುವ ಜನರ ಮನಸ್ಸನ್ನು ಮೊದಲು ನಾವು ಗೆಲ್ಲಬೇಕು ಇಲ್ಲದಿದ್ದರೆ ಹೊಸ ತೆರಿಗೆಗಳಿಂದ ಜನರಿಗೆ ಕಿರುಕುಳ ಹಾಗೂ ಒತ್ತಡವನ್ನುಂಟು ಮಾಡಿದಂತಾಗುತ್ತದೆ. ಸದ್ಯಕ್ಕೆ ಯಾವುದೇ ತೆರಿಗೆಗಳನ್ನು ಜನತೆಯ ಮೇಲೆ ಹೇರುವುದು ಬೇಡ ಎಂಬ ಅವಳ ಯೋಚನಾಕ್ರಮವನ್ನು ಮಹಾರಾಜ ವಿಷ್ಣುವರ್ಧನನು

ಸೇರಿದಂತೆ ಎಲ್ಲರೂ ಸಮ್ಮತಿಸಿದರು. ಹೀಗೆ ಶಾಂತಲೆಯು 'ಕರುಣೇಷುಮಂತ್ರಿ'ಯಾಗಿ ತನ್ನ ಸತಿಧರ್ಮವನ್ನು ಬೆಳಗಿದಳು. ಮರುದಿನವೇ ದೋರಸಮುದ್ರದಲ್ಲಿ 'ತೆರೆದ ಸಭೆ' ಎಂಬ ಹೊಸ ಪರಿಕಲ್ಪನೆಯನ್ನು ತಂದು, ನೂತನ ಯೋಜನೆಗಳ ಬಗ್ಗೆ ಜನತೆಗೆ ತಿಳಿಸಲು ಈ ಸಭೆಯನ್ನು ಶಾಂತಲೆಯು ಏರ್ಪಡಿಸಿದಳು. ನಾಡಿನ ಜನತೆಯನ್ನು ಈ ಸಭೆಗೆ ಆಹ್ವಾನಿಸಲಾಯಿತು. ಪ್ರಧಾನಿ ಗಂಗರಾಜರು ನೂತನ ಯೋಜನೆಗಳ ಬಗ್ಗೆ ವಿವರಿಸಿ, ಇದಕ್ಕಾಗಿ ಯಾವುದೇ ತೆರಿಗೆಯನ್ನು ಜನತೆಯಿಂದ ವಸೂಲಿ ಮಾಡುವುದಿಲ್ಲ ಎಂಬ ವಿಚಾರವನ್ನು ಸಹ ಪ್ರಕಟಿಸಿದರು. ಇದನ್ನು ಕೇಳಿ ಜನರು ಹರ್ಷಿತರಾಗಿ ಸ್ವಯಂಪ್ರೇರಣೆಯಿಂದ ಹೆಚ್ಚಿನ ತೆರಿಗೆಯನ್ನು ನೀಡಲು ಸ್ವತಃ ಒಪ್ಪಿ, ಮಹಾರಾಜರ ಪದತಲದಲ್ಲಿ ತಮ್ಮ ಅಮೂಲ್ಯವಾದ ಕಾಣಿಕೆಗಳನ್ನು ಯೋಜನೆಗಳ ವೆಚ್ಚಕ್ಕಾಗಿ ಅರ್ಪಿಸಿದರು. ಇದರಿಂದ ಅಲ್ಲಿ ಚಿನ್ನ, ಮತ್ತಿತರ ಬೆಲೆ ಬಾಳುವ ವಸ್ತುಗಳ ರಾಶಿಯೇ ಸೃಷ್ಟಿಯಾಯಿತು. ಜನತೆಯ ಪ್ರೀತಿ, ವಿಶ್ವಾಸವನ್ನು ಕಂಡು ಇದಕ್ಕೆಲ್ಲ ಶಾಂತಲೆಯೇ ಕಾರಣ ಎಂಬ ಮೆಚ್ಚುಗೆಯನ್ನು ವಿಷ್ಣುವರ್ಧನನು ಸೂಚಿಸಿದನು. ಈ ಯೋಜನೆಗಳ ಕಾರ್ಯಗತದಿಂದ ರಾಜ್ಯವು ಮತ್ತಷ್ಟು ಅಭಿವೃದ್ಧಿ ಹೊಂದಿ ಸುಭೀಕ್ಷತೆಯಿಂದ ಮಹಾರಾಜನ ಜೀವನನೌಕೆಯ ಅವನ ''ಮನೋರಾಗ ಸಾಗರಾಭಿವರ್ಧನ ಚಂದ್ರಲೇಖೆ, ಅಭಿನವ ರುಕ್ಮಿಣಿದೇವಿ, ಪತಿಹಿತ ಸತ್ಯಭಾಮೆ, ಪತಿವ್ರತಾ ಪ್ರಭಾವ ಪ್ರಸಿದ್ಧಸೀತೆ''ಯಂತೆ ಶಾಂತಲೆಯ ದೆಸೆಯಿಂದ ಆನಂದಸಾಗರದಲ್ಲಿ ತೇಲುತ್ತಿತ್ತು.

**ಸೈನ್ಯ ಪದ್ಧತಿ:** ಹೊಯ್ಸಳ ಸೈನ್ಯವು ಆಳ್ವಿಕೆಯಲ್ಲಿ ಬಲಿಷ್ಠವಾಗಿತ್ತು. ಗರುಡ ಪದ್ಧತಿ ಅಸ್ತಿತ್ವದಲ್ಲಿದ್ದು, ಇವರು ರಾಜರ ಅಂಗರಕ್ಷಕರೂ ಸಹ ಆಗಿದ್ದರು. ಬಲಗಾಲಿಗೆ 'ತೋಡ' ಎಂಬ ಹೆಸರಿನ ಲೋಹದ ಬಳೆಯನ್ನು ತೊಡುವ ಮೂಲಕ ಒಬ್ಬ ಸೈನಿಕನು ರಾಜನಿಗೆ ಗರುಡನಾಗುತ್ತಿದ್ದನು. ಇದರ ಪ್ರಕಾರ ರಾಜನು ಸತ್ತರೆ ಅವನೊಂದಿಗೆ ಇವನು ಸಹ ಪ್ರಾಣತ್ಯಾಗ ಮಾಡುವುದು ಪದ್ಧತಿಯಾಗಿದೆ. ಈ ಕಾದಂಬರಿಯಲ್ಲಿ ಮಹಾರಾಜ ವಿಷ್ಣುವರ್ಧನನಿಗೆ ಪ್ರಧಾನಿ ಗಂಗರಾಜರವರು ಗರುಡರಾಗಿದ್ದರು. ನಂತರ ಅವರ ಮಗ ಬೊಪ್ಪಣನು ವಿಷ್ಣುವರ್ಧನ–ಶಾಂತಲೆಯ ಮಗ ಬಿಟ್ಟಿಯಣ್ಣನಿಗೆ ಗರುಡನಾಗುವ ಮೂಲಕ ಅನುವಂಶೀಯವಾಗಿ ಈ ಪದ್ಧತಿಯನ್ನು ಮುಂದುವರಿಸಿದನು. ಚಾಲುಕ್ಯ ಜಗದ್ದೇವನಿಂದ ಯುದ್ಧದಲ್ಲಿ ಬಿಟ್ಟಿಯಣ್ಣನು ಹತನಾದಾಗ ಅವನನ್ನು ಪ್ರತೀಕಾರವಾಗಿ ಕೊಂದು ಬಿಟ್ಟಿಯಣ್ಣನ ಪಾದದ ಬಳಿಯೇ ತನ್ನ ರುಂಡವನ್ನು ಛೇದಿಸಿಕೊಂಡು ಪ್ರಾಣತ್ಯಾಗ ಮಾಡಿದ ವೀರರೋಚಕ ಘಟನೆಯ ಪ್ರಸ್ತಾಪವಿದೆ.

**ಸಾಮಾಜಿಕ ವ್ಯವಸ್ಥೆ**

**ಮಹಿಳೆಯರ ಸ್ಥಾನಮಾನ:** ಹೊಯ್ಸಳರ ಕುಲದೇವತೆಯು ವಾಸಂತಿಕಾದೇವಿಯಾಗಿದ್ದು, ಈ ಮೂಲಕ ಮಾತೃದೇವತಾ ಆರಾಧನೆಯು ಅಸ್ತಿತ್ವದಲ್ಲಿತ್ತು. ದೇವಾಲಯದ ಹೊರಭಾಗ ಶಿಲಾಬಾಲಿಕೆಯಿಂದ ಮದನಿಕೆಗಳಿದ್ದು

ಸ್ತ್ರೀಯರಿಗೆ ಕಲೆ–ಸಂಸ್ಕೃತಿಗಳಲ್ಲಿ ಆಸಕ್ತಿ ಇತ್ತು ಎಂಬ ಅಂಶಗಳನ್ನು ಕಾದಂಬರಿಯು ಪ್ರತಿಪಾದಿಸುತ್ತದೆ. ಈ ಕೃತಿಯು ಶಾಂತಲೆಯನ್ನು ಕುರಿತು ರಚಿತವಾಗಿದ್ದು, ಇದರಿಂದ ಮೇಲ್ವರ್ಗ ಮಹಿಳೆಯರ ಜೀವನವನ್ನು ಮಾತ್ರ ಚಿತ್ರಿಸುತ್ತದೆ. ಈ ಕಾದಂಬರಿಯಲ್ಲಿ ಶಾಂತಲೆ, ಬಮ್ಮಲೆ, ಭೈರಬ್ಬೆಯ ಪಾತ್ರವು ಪ್ರಮುಖವಾಗಿದೆ. ಸಾರ್ವಜನಿಕವಾಗಿ ನೃತ್ಯ, ಸಂಗೀತ, ಗಾಯನಗಳಲ್ಲಿ ಮಹಿಳೆಯರು ಭಾಗವಹಿಸುತ್ತಿದ್ದ ವಿಚಾರವನ್ನು ಕೃತಿಯ ಆರಂಭದಲ್ಲಿ ನಡೆಯುವ ನೃತ್ಯ ಕಾರ್ಯಕ್ರಮವೇ ಬಹಿರಂಗ ಪಡಿಸುತ್ತದೆ. ದೇವಾಲಯಗಳ ನಿರ್ಮಾಣದಲ್ಲಿ ಸ್ತ್ರೀಯರ ನೃತ್ಯ ಮಾದರಿಯ ಶಿಲ್ಪಗಳನ್ನು ನಿರ್ಮಿಸುತ್ತಿದ್ದರು. ಇದರಿಂದ ಸ್ತ್ರೀಯರಿಗೆ ಸ್ವಾತಂತ್ರ್ಯ, ಸಮಾಜದಲ್ಲಿ ಉತ್ತಮ ಗೌರವ ಸಲ್ಲುತ್ತಿದ್ದವೆಂದು ಈ ಕಾದಂಬರಿಯ ಮೂಲಕ ತಿಳಿಯಬಹುದಾಗಿದೆ. 'ರಾಜಾ ಬಹುವಲ್ಲಭ' ಎಂಬ ಮಾತನ್ನು ವಿಷ್ಣುವರ್ಧನನಿಗೆ ಈ ಕಾದಂಬರಿಯಲ್ಲಿ ಹಲವು ರಾಣಿಯರ ಜೊತೆ ನಡೆದ ವಿವಾಹಗಳೇ ಪುಷ್ಟೀಕರಿಸುತ್ತವೆ. ಇದರಿಂದ ಬಹುಪತ್ನಿತ್ವ ವ್ಯವಸ್ಥೆಯು ಆಗಿನ ಸಮಾಜದಲ್ಲಿ ಅಸ್ತಿತ್ವದಲ್ಲಿತ್ತು ಎಂಬ ಅಂಶವು ಬೆಳಕಿಗೆ ಬರುತ್ತದೆ. ಸಾಮ್ರಾಜ್ಯ ವಿಸ್ತರಣೆಯ ಉದ್ದೇಶವೂ ಇದಕ್ಕೆ ಕಾರಣವಾಗುತ್ತದೆ.

**ಶಿಕ್ಷಣ:** ಮೇಲ್ವರ್ಗದ ಮಹಿಳೆಯರು ಪುರುಷರಂತೆ ಸರ್ವವಿದ್ಯೆಗಳಲ್ಲಿಯೂ ಪಾರಂಗತರಾಗಿದ್ದರು. ಶಾಂತಲೆಯು ಪ್ರಸಿದ್ಧ ನೃತ್ಯಗಾರ್ತಿ, ಗಣಿತಜ್ಞೆ, ರಾಜತಾಂತ್ರಿಕ ನಿಪುಣೆ, ವಾಸ್ತುಶಿಲ್ಪ ಕಲಾತಜ್ಞೆಯಾಗಿದ್ದಳು. "ನೃತ್ಯಸರಸ್ವತಿ"ಯಾದ ಶಾಂತಲೆಯ ನೃತ್ಯವನ್ನು ನೋಡಿಯೇ ವಿಷ್ಣುವರ್ಧನನಿಗೆ ಅವಳ ಮೇಲೆ ಪ್ರೇಮಾಂಕುರವಾಯಿತು. 'ದಯಾರಸಾಮೃತಪೂರ್ಣೆ'ಯಾದ ಶಾಂತಲೆಯ ಬಳಿ ಆಶ್ರಯ ಬೇಡಿ ಬಂದವರಿಗೆ ಅವರ ಪ್ರತಿಭೆ, ಯೋಗ್ಯತೆಗನುಗುಣವಾಗಿ ಊಳಿಗವರ್ಗದಲ್ಲಿ ಸೇರಿಸಿಕೊಳ್ಳುತ್ತಿದ್ದಳು. ವಿದ್ಯಾಭ್ಯಾಸದಲ್ಲಿ ಆಸಕ್ತರಾದ ತರುಣ ಬಾಲಕರಿಗೆ ಗುರುಕುಲದಲ್ಲಿ ಶಿಕ್ಷಣ ದೊರೆಯುವಂತೆ ಮಾಡುತ್ತಿದ್ದಳು. "ಗೀತವಾದ್ಯನೃತ್ಯಸೂತ್ರಧಾರಿ"ಯಾದ ಶಾಂತಲೆಯು 'ಭರತ ನೃತ್ಯಕೇಂದ್ರ' ಎಂಬ ನಾಟ್ಯಪರಿಷತ್ ಅನ್ನು ಸ್ಥಾಪಿಸಿ ಅಸಂಖ್ಯಾತ ನಾಟ್ಯ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿ ಬೆಳೆಸುತ್ತಿದ್ದಳು. ಧರ್ಮದ ಗುರುಗಳ ಬಳಿ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವ ಮೂಲಕ ಗುರುಕುಲ ಶಿಕ್ಷಣ ಪದ್ಧತಿಯು ಅಸ್ತಿತ್ವದಲ್ಲಿತ್ತು. ಶಾಂತಲೆಯು ತನ್ನ ಮಗ ಬಿಟ್ಟಿಯಣ್ಣನನ್ನು ಜೈನಗುರು ಶುಭಚಂದ್ರಮುನಿಗಳ ಬಳಿ ವಿದ್ಯಾಭ್ಯಾಸ ಮಾಡಿಸುತ್ತಿದ್ದಳು. 'ಸಕಲ ಗುಣಾಮಣಿ'ಯಾದ ಶಾಂತಲೆಯು ವಾಸ್ತುಶಿಲ್ಪ ತಜ್ಞೆಯಾಗಿದ್ದು, ನಕ್ಷೆ ತಯಾರಿಕೆಯಲ್ಲಿ ಅವಳಿಗಿದ್ದ ತಾಂತ್ರಿಕ ಜ್ಞಾನ, ಪ್ರತಿಭೆಗಳು ವಿಜಯನಾರಾಯಣ, ಚನ್ನಕೇಶವ ದೇವಾಲಯ, ಸವತಿ ಗಂಧವಾರಣೆ ಬಸದಿ, ಹೊಯ್ಸಳೇಶ್ವರ ಹಾಗೂ ಶಾಂತಲೇಶ್ವರ ದೇವಾಲಯಗಳ ನಿರ್ಮಾಣ ಕಾರ್ಯಗಳಲ್ಲಿ ಸುವ್ಯಕ್ತವಾಗಿದ್ದವು. "ರಣವ್ಯಾಪಾರದೊಳ್ ಖಡ್ಗದೇವತೆ" ಎನಿಸಿದ್ದ ಶಾಂತಲೆಯು ತನ್ನ ಮಗ ಬಿಟ್ಟಿಯಣ್ಣನಿಗೆ ಕತ್ತಿವರಸೆ, ಕುದುರೆ ಸವಾರಿ, ಶಸ್ತ್ರಾಸ್ತ್ರಗಳ ಬಗ್ಗೆ ತರಬೇತಿ ನೀಡುತ್ತಿದ್ದಳು. ಚೋಳರ ಸಾಮಂತ ಜಗದ್ದೇವನ ವಿರುದ್ಧ ಯುದ್ಧಕ್ಕೆ ಹೊರಟಾಗ ವಿಷ್ಣುವರ್ಧನನಿಗೆ ಅಶ್ವಹೃದಯ ಪಾರಂಗತೆ, ಅಶ್ವವಿದ್ಯಾ ನೈಪುಣ್ಯೆ ಬಮ್ಮಲೆಯು ತಾನೇ ಉತ್ತಮ ಜಾತ್ಯಾಶ್ವವೊಂದನ್ನು ಆರಿಸಿದಳು. ಈ

ಪ್ರಸಂಗಗಳು ಸ್ತ್ರೀಯರು ಪುರುಷರಿಗೆ ಸಮಾನವಾಗಿ ಶಿಕ್ಷಣವನ್ನು ಪಡೆದು ಹಲವು ಶಾಸ್ತ್ರಗಳಲ್ಲಿ ಪಂಡಿತೆಯರಾಗಿದ್ದರೆಂದು ಪ್ರತಿಪಾದಿಸುತ್ತದೆ.

**ಧಾರ್ಮಿಕ ಜೀವನ:** ಸಮಾಜದಲ್ಲಿ ಜೈನ, ಶೈವ, ವೈಷ್ಣವ ಧರ್ಮಗಳು ಅಸ್ತಿತ್ವದಲ್ಲಿದ್ದವು. ಜೈನಧರ್ಮದ ಬಿಟ್ಟಿದೇವನು ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತಾವಲಂಬಿಯಾಗಿ 'ವಿಷ್ಣುವರ್ಧನ'ನಾದನು. ಆದರೂ ಸರ್ವಧರ್ಮಗಳನ್ನು ಸಮನ್ವಯದಿಂದ ಕಾಣುತ್ತಿದ್ದನು. ಆತನ ಪಟ್ಟಮಹಿಷಿ ಶಾಂತಲೆಯು ಜೈನಧರ್ಮದವಳಾಗಿದ್ದಳು. ಕೆಲವು ಚಿಂತಕರು ಈ ಅಂಶವೇ ಅವರ ದಾಂಪತ್ಯದ ಬಿರುಕಿನ ಕಾರಣಗಳಲ್ಲಿ ಒಂದಾಗಿರಬಹುದೇ ಎಂಬ ಅನುಮಾನವನ್ನು ವ್ಯಕ್ತಪಡಿಸುತ್ತಾರೆ. ಹೊಯ್ಸಳ ರಾಜ್ಯದಲ್ಲಿ ಆಗಾಗ ಧಾರ್ಮಿಕ ಸಂಘರ್ಷಗಳು ಸಹ ಸಂಭವಿಸುತ್ತಿದ್ದವು. ಇಂತಹ ಸಂದರ್ಭದಲ್ಲಿ ರಾಜನೇ ಅಂತಿಮ ನ್ಯಾಯಾಧೀಶನಾಗಿ ತೀರ್ಪು ನೀಡುತ್ತಿದ್ದನು. ಇದಕ್ಕೆ ಉದಾಹರಣೆಯಾಗಿ ಕಾದಂಬರಿಯಲ್ಲಿ 'ಸೋಮೇಶ್ವರ ದೇವಾಲಯದ ವಿವಾದ ಪ್ರಸಂಗ'ವು ಬರುತ್ತದೆ. ಸೋಮೇಶ್ವರ ದೇವಾಲಯವು ಹಿಂದೆ ಜೈನ ದೇವಾಲಯವಾಗಿತ್ತು. ಕಾರಣಾಂತರಗಳಿಂದ ಈಗ ಶೈವ ದೇವಾಲಯವಾಗಿದೆ; ಆದ್ದರಿಂದ ಇದು ಮತ್ತೆ ಜೈನ ದೇವಾಲಯವಾಗಬೇಕೆಂದು ಜೈನರು ಪ್ರತಿಭಟಿಸುತ್ತಿದ್ದರು. ಜೈನರ ಮುಖ್ಯಸ್ಥ ಶಾಂತರಾಜಯ್ಯನು ಆ ದೇವಾಲಯಕ್ಕೆ ಅರಮನೆಯಿಂದ ದೊರೆಯುತ್ತಿದ್ದ ಪಡಿಕಾಣಿಕೆಗಳನ್ನು ತಡೆಹಿಡಿದನು. ಆಗ ಜನರು ರಾಜಧಾನಿಯ ನ್ಯಾಯಸಭೆಯಲ್ಲಿ ನ್ಯಾಯವನ್ನು ಬೇಡಿ ಬಂದಾಗ ವಿಷ್ಣುವರ್ಧನನು ಸಮಸ್ಯೆಯನ್ನು ಶಾಂತಲೆಯ ಮುಂದಿಟ್ಟನು. "ಸಕಳಸಮಯ ರಕ್ಷಾಮಣಿ", "ಬಿಣ್ಪಿಂದಂ ಭೂಮಿದೇವತೆ" ಎಂದು ಖ್ಯಾತಳಾದ ಶಾಂತಲೆಯು "ಯಾವುದೇ ಧರ್ಮ, ಯಾವುದೇ ಮತಗಳಾಗಲಿ ಎಲ್ಲವೂ ಮೂಲತಃ ಒಂದೇ ತತ್ವ ನಂಬಿಕೆಯಿಂದ ಹುಟ್ಟಿ ಬಂದಿವೆ. ನಮ್ಮೊಳಗಿನ ಕಿತ್ತಾಟ ಪರಕೀಯರ ದಾಳಿಗೆ ಅವಕಾಶ ಕಲ್ಪಿಸುತ್ತದೆ" ಎಂಬ ಹಿತೋಪದೇಶವನ್ನು ನೀಡಿದಳು. "ಆ ದೇವಾಲಯವು ಶೈವ ದೇವಾಲಯವಾಗಿ ಮುಂದುವರೆಯಲಿ; ಜೈನಧರ್ಮಕ್ಕೆ ನೂತನ ಬಸದಿಯನ್ನು ನಿರ್ಮಿಸುವ ಏರ್ಪಾಡು ಆಗಲಿ" ಎಂಬ ನ್ಯಾಯವನ್ನು ನೀಡಿ ಬಿಕ್ಕಟ್ಟನ್ನು ಬಗೆಹರಿಸಿದಳು. ಶಾಂತಲೆಯ ಸಮಯಪ್ರಜ್ಞೆ ಮಾತಿನ ಚಾಣಾಕ್ಷತೆ, ಸರ್ವಧರ್ಮ ಸಮನ್ವಯತೆಯ ಗುಣವನ್ನು ನೋಡಿ ವಿಷ್ಣುವರ್ಧನನು "ವಿವೇಕ ಬೃಹಸ್ಪತಿ", "ಪ್ರತ್ಯುತ್ಪನ್ನ ವಾಚಸ್ಪತಿ" ಎಂದು ಹೊಗಳಿದನು. ಬೋಕಿಮಯ್ಯನು ಸಹ "ಚತುಸ್ಸಮಯ ಸಮುದ್ಧರಣೆ", "ಸಮ್ಯಕ್ತ ಚೂಡಾಮಣಿ" ಎಂದು ಶ್ಲಾಘಿಸಿದನು. ಮುಂದೆ ಜೀವನದಲ್ಲಿ ಜಿಗುಪ್ಸೆಗೊಂಡು ಶಾಂತಲೆಯು ಸಲ್ಲೇಖನವ್ರತ ಕೈಗೊಂಡು "ಜಿನನಾಥ ತನಗೆಂದುಮಿಷ್ಟದೈವ" ಎಂದು ತನ್ನ ದೇಹವನ್ನು ತ್ಯಜಿಸುವ ದೃಢನಿಶ್ಚಯ ಮಾಡಿದಳು.

**ಸಾಂಸ್ಕೃತಿಕ ವೈಭವ:** ಹೊಯ್ಸಳರು ಕಲೆ–ವಾಸ್ತುಶಿಲ್ಪಕ್ಕೆ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಇವರು ಅನೇಕ ದೇವಾಲಯಗಳನ್ನು ಬಸದಿಗಳನ್ನು ನಿರ್ಮಿಸಿದ್ದಾರೆ. ಕಾದಂಬರಿಯ ಪ್ರಕಾರ ಯುದ್ಧದಲ್ಲಿ ವಿಜಯಗಳಿಸಿದ ನೆನಪಿಗಾಗಿ ಹಲವು ದೇವಾಲಯಗಳನ್ನು ನಿರ್ಮಿಸಿರುವ ಉಲ್ಲೇಖವಿದೆ. ವಿಷ್ಣುವರ್ಧನ ತಲಕಾಡಿನ ಗಂಗರಸ ದಾಮೋದರನನ್ನು

ಸೋಲಿಸಿದ ವಿಜಯೋತ್ಸವದ ನೆನಪಿಗೆ ಕೀರ್ತಿನಾರಾಯಣನ ದೇವಾಲಯವನ್ನು ತಲಕಾಡಿನಲ್ಲಿ ನಿರ್ಮಿಸಿದನು. ಯಗಚಿ ನದಿಯ ತೀರದಲ್ಲಿರುವ ಬೇಲಾಪುರದಲ್ಲಿ ವಿಜಯನಾರಾಯಣ ದೇವಾಲಯದ ನಿರ್ಮಾಣ, ಶಾಂತಲೆಯ ಬಯಕೆಯಂತೆ ಚನ್ನಕೇಶವ ದೇವಾಲಯವು ಸಹ ಈ ಆವರಣದಲ್ಲಿ ನಿರ್ಮಿತವಾಗುತ್ತಿತ್ತು. ದೋರಸಮುದ್ರದಲ್ಲಿ ಚೆಲುವನಾರಾಯಣನ ದೇವಾಲಯದ ನಿರ್ಮಾಣ, ಕೇತುಮಲ್ಲನು ತನ್ನ ಸಂತೋಷಕ್ಕಾಗಿ ಹೊಯ್ಸಳೇಶ್ವರ ಹಾಗೂ ಶಾಂತಲೇಶ್ವರ ದೇವಾಲಯವನ್ನು ವಿಷ್ಣುವರ್ಧನ ಹಾಗೂ ಶಾಂತಲೆಯ ಪ್ರತೀಕವಾಗಿ ನಿರ್ಮಿಸಿದನು. ಶಾಂತಲೆಯು ಜನರ ಪ್ರೀತಿಯನ್ನು ಗಳಿಸಲು, ಧರ್ಮಗಳ ನಡುವೆ ಸಾಮರಸ್ಯ ಬೆಳೆಸಲು ಹಲವು ದೇವಸ್ಥಾನ ಹಾಗೂ ಬಸದಿಗಳನ್ನು ನಿರ್ಮಿಸಿದಳು. ಶಾಂತಲೆ ಸವತಿ ಗಂಧವಾರಣೆ ಬಸದಿಯನ್ನು ನಿರ್ಮಿಸಿದಳು. ಇದರ ಅರ್ಥ ಸವತಿಯರನ್ನು ಸಮರ್ಥ ರೀತಿಯಲ್ಲಿ, ಪ್ರೀತಿಯಿಂದ ನಡೆಸಿಕೊಂಡು ಅಂಕೆಯಲ್ಲಿಟ್ಟು ತಿದ್ದುವವಳು ಎಂಬ ಘನವಾದ ಅರ್ಥದಲ್ಲಿ "ಭಲೇ ಉದ್ವೃತ್ತ ಸವತಿ ಗಂಧವಾರಣೆ" ಎಂದು ಶಾಂತಲೆಯನ್ನು ಗಂಗರಾಜರು ಶ್ಲಾಘಿಸಿದ್ದಾರೆ. ಭರತನಾಟ್ಯ, ಸಂಗೀತ, ವಾದ್ಯ ಮುಂತಾದವುಗಳ ಬಗ್ಗೆ ಜನರಲ್ಲಿ ಆಸಕ್ತಿ ಇತ್ತು ಎಂಬುದು ಹೊಯ್ಸಳರ ದೇವಾಲಯಗಳ ಮದನಿಕೆಗಳಲ್ಲಿಯೇ ಕಾಣಸಿಗುತ್ತವೆ. ಹೀಗೆ ಹಲವು ದೃಷ್ಟಿಕೋನಗಳಿಂದ ಶಾಂತಲೆಯ ವ್ಯಕ್ತಿತ್ವ ಹಾಗೂ ಆ ಕಾಲದ ಹೊಯ್ಸಳ ರಾಜ್ಯದ ವೈಭವವನ್ನು 'ನೃತ್ಯ ಸರಸ್ವತಿ' ಕಾದಂಬರಿಯ ಮೂಲಕ ವೈ.ಕೆ. ಸಂಧ್ಯಾ ಶರ್ಮರವರು ಕಟ್ಟಿಕೊಟ್ಟಿದ್ದಾರೆ. ಈ ಕಾದಂಬರಿಯಲ್ಲಿ ಶಾಂತಲೆಯ ಜೀವನದ ಅಂತ್ಯವು ಹೇಗಾಯಿತು ಎಂಬ ಮಾಹಿತಿಯ ಸ್ಪಷ್ಟನೆಯಿಲ್ಲ. ಆದರೆ ವಿಷ್ಣುವರ್ಧನನ ರಾಣಿಯಾಗಿ, ಪಟ್ಟಮಹಿಷಿಯಾಗಿ, ಅವಳ ಜೀವನವು ಹೊಯ್ಸಳ ನಾಡಿನಿಂದ ಹೇಗೆ ಕೊನೆಯಾಯಿತು? ಎಂಬುದನ್ನು ದೋರಸಮುದ್ರದ ನಿರ್ಗಮನದಿಂದ ಕಾದಂಬರಿಯನ್ನು ಲೇಖಕಿಯು ಮುಕ್ತಾಯಗೊಳಿಸಿದ್ದಾರೆ. ಮಹಿಳಾಪ್ರಧಾನವಾದ ಈ ಕಾದಂಬರಿಯಲ್ಲಿ ಶಾಂತಲೆಯ ಪಾತ್ರವೇ ಪ್ರಮುಖವಾಗಿದ್ದು, "ಹೆಣ್ಣಿಗೆ ಹೆಣ್ಣೆ ಶತ್ರು" ಎಂಬ ಮಾತನ್ನು ಧ್ವನಿಸುತ್ತದೆ.

**ಆಕರ ಗ್ರಂಥ:**

1. ಸಂಧ್ಯಾ ಶರ್ಮ ವೈ.ಕೆ., (2022), ನೃತ್ಯಸರಸ್ವತಿ, ಮೈಸೂರು: ಭಾರತೀ ಪ್ರಕಾಶನ.